ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, ಸೋಮವಾರ, ೦೮ ಸೆಪ್ಟೆಂಬರ್, ೨೦೨೫ (ಭಾದ್ರಪದ ೧೭, ಶಕವರ್ಷ ೧೯೪೭) BENGALURU, MONDAY, 08 SEPTEMBER, 2025 (BHADRAPADA 17, SHAKAVARSHA 1947)	ನಂ. ೫೪೬ No. 546

ಕರ್ನಾಟಕ ಸರ್ಕಾರ

ಸಂಖ್ಯೆ: ಎಫ್‌ಡಿ-ಸಿಎಂ/50/2025

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 03.09.2025

ಅಧಿಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ, **2004 (2005**ರ ಕರ್ನಾಟಕ ಅಧಿನಿಯಮ ಸಂಖ್ಯೆ **30)**ರ **21**ಎ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮುಂದಿನ ಯೋಜನೆಯನ್ನು ರೂಪಿಸುತ್ತದೆ, ಎಂದರೆ:-

ಯೋಜನೆ

1. ಶೀರ್ಷಿಕೆ ಮತ್ತು ಪ್ರಾರಂಭ - (1) ಈ ಯೋಜನೆಯನ್ನು, ಹಣಕಾಸು ಸಂಸ್ಥೆಗಳ ಸ್ವತ್ತುಗಳನ್ನು ಜಪ್ತಿ ಮಾಡುವುದಕ್ಕೆ ಕಾರಣವಾಗುವ ಮೂಲ ಮಾಹಿತಿಯನ್ನು ಒದಗಿಸುವ ಬಾತ್ಮೀದಾರರು ಮತ್ತು ಮಾಹಿತಿದಾರರಿಗೆ ಪ್ರೋತ್ಸಾಹಧನ ಯೋಜನೆ, **2025** ಎಂದು ಕರೆಯತಕ್ಕದ್ದು.

(2) ಈ ಯೋಜನೆಯು, ಕರ್ನಾಟಕ ರಾಜ್ಯಪತ್ರದಲ್ಲಿ ಅದರ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.- (1) ಈ ಯೋಜನೆಯಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **"ಅಧಿನಿಯಮ"** ಎಂದರೆ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ, **2004 (2005**ರ ಕರ್ನಾಟಕ ಅಧಿನಿಯಮ **30);**

(ಬಿ) **"ನಿರುಪಾಧಿಕ ಜಪ್ತಿ"** ಎಂಬುದು **5**ನೇ ಪ್ರಕರಣದ **(2)**ನೇ ಉಪಪ್ರಕರಣದಲ್ಲಿರುವಂತೆ ಅದೇ ಅರ್ಥವನ್ನೇ ಹೊಂದಿರತಕ್ಕದ್ದು;

(ಸಿ) **"ಸ್ವತ್ತು"** ಎಂದರೆ, ನಗದಿಗೆ ಪರಿವರ್ತಿಸಬಹುದಾದ ಯಾವುದೇ ಮೌಲ್ಯದ ಮೂರ್ತ ಅಥವಾ ಅಮೂರ್ತ ಚರ ಅಥವಾ ಸ್ಥಿರ ಸ್ವತ್ತು;

(ಡಿ) **"ಬೇನಾಮಿ ವ್ಯವಹಾರ"** ಎಂದರೆ, ಬೇನಾಮಿ ಸ್ವತ್ತು ವ್ಯವಹಾರಗಳ ನಿಷೇಧ ಅಧಿನಿಯಮ, **1988 (1988**ರ ಕೇಂದ್ರ ಅಧಿನಿಯಮ **45)** ರಲ್ಲಿರುವಂಥ ಅರ್ಥವನ್ನೇ ಹೊಂದಿರತಕ್ಕದ್ದು;

(ಇ) **"ನಮೂನೆ"** ಎಂದರೆ, ಈ ಯೋಜನೆಗೆ ಅನುಬಂಧಿಸಲಾದ ನಮೂನೆ;

(ಎಫ್) **"ಮಾಹಿತಿದಾರ"** ಎಂದರೆ, ನಮೂನೆ-Iರಲ್ಲಿ ನಿರ್ದಿಷ್ಟಪಡಿಸಿದಂತೆ ಸಕ್ಷಮ ಪ್ರಾಧಿಕಾರಿಗೆ ಮೂಲ ಮಾಹಿತಿಯನ್ನು ಸ್ವಯಂಪ್ರೇರಣೆಯಿಂದ ಒದಗಿಸುವ ವ್ಯಕ್ತಿ;

(ಜಿ) **"ಮಾಹಿತಿದಾರ ಇನಾಮು/ಬಹುಮಾನ ಸಮಿತಿ"** ಎಂದರೆ, ಈ ಯೋಜನೆಯ ಖಂಡ **11**ರ ಅಡಿಯಲ್ಲಿ ರಚಿಸಲಾದ ಸಮಿತಿ;

(ಎಚ್) **"ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರ"** ಎಂದರೆ, ಈ ಯೋಜನೆಯ ಖಂಡ **12**ರ ಅಡಿಯಲ್ಲಿ ಇನಾಮು/ಬಹುಮಾನ ನೀಡಲು **ಸರ್ಕಾರದ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿಲ್ಲದ ಸಕ್ಷಮ ಪ್ರಾಧಿಕಾರ;**

(ಐ) **"ಮೂಲ ಮಾಹಿತಿ"** ಎಂದರೆ, ತಪ್ಪಿತಸ್ಥ ಹಣಕಾಸು ಸಂಸ್ಥೆಯ ನಿರ್ದೇಶಕರು, ಪಾಲುದಾರರು, ಪ್ರವರ್ತಕರು, ವ್ಯವಸ್ಥಾಪಕರು ಅಥವಾ ಸದಸ್ಯರು ಮತ್ತು ಪದತ್ಯಾಗ ಮಾಡಿದ ಅಥವಾ ಸಂಸ್ಥೆಗೆ ರಾಜೀನಾಮೆ ನೀಡಿದ ಮಾಜಿ ನಿರ್ದೇಶಕರು, ಪಾಲುದಾರರು ಅಥವಾ ಪ್ರವರ್ತಕರು ಅಥವಾ ಹಣಕಾಸು ಸಂಸ್ಥೆಯ ಕಾರ್ಯಚಟುವಟಿಕೆಗಳಲ್ಲಿ ಶಾಮೀಲಾಗಿದ್ದಾರೆಂದು ಶಂಕಿಸಲಾದ ಯಾವುದೇ ವ್ಯಕ್ತಿಯ ಕಾರ್ಯಚಟುವಟಿಕೆಗಳು ಮತ್ತು ಸ್ವತ್ತುಗಳ ಬಗ್ಗೆ ಮಾಹಿತಿ,-

(ಎ) ಸದರಿ ಮಾಹಿತಿಯು, ಮಾಹಿತಿಯ ಪ್ರಧಾನ ಮೂಲವು ಮಾಹಿತಿದಾರನೇ ಆಗಿರುವ ಹೊರತು, ಸಕ್ಷಮ ಪ್ರಾಧಿಕಾರಿಗೆ ಅಥವಾ ಸರ್ಕಾರದಿಂದ ನೇಮಕಗೊಂಡ ತನಿಖಾ ಅಧಿಕಾರಿಗೆ ಯಾವುದೇ ಮೂಲದಿಂದ ತಿಳಿದಿರಬಾರದು;

(ಬಿ) ಅಂತಹ ತಪ್ಪಿತಸ್ಥರ ಸ್ವತ್ತುಗಳನ್ನು ಗುರುತಿಸುವಿಕೆ, ಜಪ್ತಿ ಮತ್ತು ವಸೂಲಿಗಾಗಿ ತಪ್ಪಿತಸ್ಥ ಹಣಕಾಸು ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ವಿಶ್ವಾಸಾರ್ಹವಾದ ಮತ್ತು ಅವುಗಳಿಗೆ ನೇರವಾಗಿ ಸಂಬಂಧಪಡುವ ಮಾಹಿತಿಯಾಗಿರಬೇಕು;

(ಸಿ) ದೃಢೀಕರಿಸಿದ ದಾಖಲೆಯಾಗಿರಬೇಕು;

(ಡಿ) ವದಂತಿ ಆಧಾರಿತವಾಗಿರಬಾರದು;

(ಐ) ವಿಚಾರಣೆಯ ನಂತರ ಸುಳ್ಳು, ದಾರಿತಪ್ಪಿಸುವ ಅಥವಾ ದುರುದ್ದೇಶಪೂರಿತ ಎಂದು ಸಾಬೀತಾಗಿರಬಾರದು.

(ಜೆ) "ಮೀಸಲು ಬೆಲೆ" ಎಂದರೆ, ಸ್ವತ್ತನ್ನು ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿದಂತಹ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡದ ಅಥವಾ ಹರಾಜು ಮಾಡದ ಬೆಲೆ; ಮತ್ತು

(ಕೆ) "ಬಾತ್ಮೀದಾರ" ಎಂದರೆ, ಸಾರ್ವಜನಿಕ ಹಿತಾಸಕ್ತಿಯಿಂದ ಹಣಕಾಸು ಸಂಸ್ಥೆಯ ಕಾನೂನುಬಾಹಿರ, ಅನೈತಿಕ ಅಥವಾ ಹಾನಿಕಾರಕ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವ ವ್ಯಕ್ತಿ ಮತ್ತು ಆ ವ್ಯಕ್ತಿಯು ಮೋಸದಿಂದ ಕಾರ್ಯನಿರ್ವಹಿಸುವ ಹಣಕಾಸು ಸಂಸ್ಥೆಯ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿರಬಾರದು ಅಥವಾ ಶಾಮೀಲಾಗಿರಬಾರದು.

(2) ಈ ಯೋಜನೆಯಲ್ಲಿ ಬಳಸಲಾದ ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು ಈ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

3. ಅನ್ವಯ ಮತ್ತು ವ್ಯಾಪ್ತಿ.- ಈ ಯೋಜನೆಯು, ಹಣಕಾಸು ಸಂಸ್ಥೆಯ ಒಡೆತನದ ಅಥವಾ ಅದರಲ್ಲಿನ ಸಹಭಾಗಿದಾರರ ಸ್ವತ್ತುಗಳನ್ನು ಗುರುತಿಸುವುದಕ್ಕೆ ಹಾಗೂ ಜಪ್ತಿ ಮಾಡುವುದಕ್ಕೆ ಪ್ರತ್ಯಕ್ಷವಾಗಿ ಕಾರಣವಾಗುವ ಸಂಬಂಧಪಟ್ಟ ಕಾನೂನುಬಾಹಿರ ಕಾರ್ಯಚಟುವಟಿಕೆಗಳನ್ನು ಬಹಿರಂಗಪಡಿಸುವ ಅಥವಾ ತಪ್ಪಿತಸ್ಥ ಹಣಕಾಸು ಸಂಸ್ಥೆಯ ಮತ್ತು ಅದರ ಸಹಭಾಗಿದಾರರ ಸ್ವತ್ತುಗಳ ಬಗೆಗಿನ ಮೂಲ ಮಾಹಿತಿಯನ್ನು ಒದಗಿಸುವ ಬಾತ್ಮೀದಾರನಿಗೆ ಅಥವಾ ಮಾಹಿತಿದಾರನಿಗೆ ಇನಾಮು/ ಬಹುಮಾನವನ್ನು ಮಂಜೂರು ಮಾಡುವ ಮತ್ತು ಸಂದಾಯ ಮಾಡುವುದನ್ನು ವಿನಿಯಮಿಸತಕ್ಕದ್ದು ಮತ್ತು ಅಂಥ ಮಾಹಿತಿಯು,-

(i) ತಪ್ಪಿತಸ್ಥ ಹಣಕಾಸು ಸಂಸ್ಥೆಯ ಪ್ರಾರಂಭದ ದಿನಾಂಕದ ತರುವಾಯ, ಸ್ವತ್ತನ್ನು ಸ್ವಾಧೀನಪಡಿಸಿಕೊಂಡ ಮತ್ತು ತಪ್ಪಿತಸ್ಥನು ಒಬ್ಬ ವ್ಯಕ್ತಿ, ಕಂಪನಿ, ಸಹಕಾರಿ ಸಂಘ, ಸೀಮಿತ ಹೊಣೆಗಾರಿಕೆ ಪಾಲುದಾರಿಕೆ, ಟ್ರಸ್ಟ್ ಅಥವಾ ಸರ್ಕಾರೇತರ ಸಂಸ್ಥೆಯಾಗಿದ್ದ ಅಥವಾ ಸದರಿ ಹಣಕಾಸು ಸಂಸ್ಥೆಯ ಮಾಲೀಕರು, ಪ್ರವರ್ತಕರು, ಪಾಲುದಾರರು, ನಿರ್ದೇಶಕರು, ವ್ಯವಸ್ಥಾಪಕರು ಅಥವಾ ಸದಸ್ಯರು ಅಥವಾ ಯಾರೇ ವ್ಯಕ್ತಿಯು-

(ಎ) ಪತ್ತೆಹಚ್ಚಲು ಸಾಧ್ಯವಾಗದ ಅಥವಾ ತಪ್ಪಿಸಿಕೊಂಡಿರುವ;

(ಬಿ) 13ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ದುರುದ್ದೇಶಪೂರಿತ ವರ್ಗಾವಣೆಯನ್ನು ಮಾಡಿರುವ ಅಥವಾ ಮಾಡಲು ಪ್ರಯತ್ನಿಸಿರುವ;

(ಸಿ) "ಬೇನಾಮಿ" ವ್ಯವಹಾರವನ್ನು ಮಾಡಿರುವ ಅಥವಾ ಸಕ್ರಿಯಗೊಳಿಸಿರುವ ಅಥವಾ ದೊಡ್ಡಮಟ್ಟದಲ್ಲಿ ನಗದು ವ್ಯವಹಾರಗಳನ್ನು ನಡೆಸಿರುವ;

(ಡಿ) ಹಣಕಾಸು ಸಂಸ್ಥೆಯು ನಿರ್ವಹಿಸುವ ಎಲ್ಲಾ ಯೋಜನೆಗಳಲ್ಲಿ ಮಾಡಿದ ಒಟ್ಟು ಠೇವಣಿಗಿಂತ ಹೆಚ್ಚಿನ ಆದಾಯವನ್ನು ಪಡೆದಿರುವ;

(ಇ) ವಿಶೇಷ ನ್ಯಾಯಾಲಯದ ಅಧಿಕಾರವಿಲ್ಲದೆ 3ನೇ ಪ್ರಕರಣದ ಅಡಿಯಲ್ಲಿ ನಿಹಿತವಾಗಿರುವ ಯಾವುದೇ ಸ್ವತ್ತುಗಳಿಂದ ಲಾಭವನ್ನು ಪಡೆದಿರುವ:

ಪ್ರಕರಣಗಳಲ್ಲಿ ವಸೂಲಿ ಮಾಡದ ಹಣ ಅಥವಾ ಸ್ವತ್ತುಗಳ ನಿರುಪಾಧಿಕ ಜಪ್ತಿ ಹಾಗೂ ಸಂಗ್ರಹಣೆಗೆ ಕಾರಣವಾಗಿರಬೇಕು.

4. ಇನಾಮು/ಬಹುಮಾನಕ್ಕೆ ಅರ್ಹರಾಗಿರುವ ಬಾತ್ಮೀದಾರ ಅಥವಾ ಮಾಹಿತಿದಾರ.- (1) ಒಬ್ಬ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ಕ್ರಮ ಕೈಗೊಳ್ಳುವುದಕ್ಕೆ ಕಾರಣವಾಗುವ ಹಣಕಾಸು ಸಂಸ್ಥೆಯ ಸಂಬಂಧಿತ ಕಾನೂನುಬಾಹಿರ ಕಾರ್ಯಚಟುವಟಿಕೆಗಳನ್ನು ಬಹಿರಂಗಪಡಿಸುವ ಮೂಲ ಮಾಹಿತಿಯನ್ನು ಒದಗಿಸಿದರೆ, ಆತನನ್ನು ಈ ಯೋಜನೆ ಅನುಸಾರವಾಗಿ ಇನಾಮು/ಬಹುಮಾನ ಪಡೆಯುವುದಕ್ಕಾಗಿ ಅರ್ಹನಾಗಿರುವ "ಬಾತ್ಮೀದಾರ" ಎಂದು ಪರಿಗಣಿಸತಕ್ಕದ್ದು.

(2) ಒಬ್ಬ ವ್ಯಕ್ತಿಯು, ಹಣಕಾಸು ಸಂಸ್ಥೆಯ ಅಥವಾ ಅದರ ಸಹಭಾಗಿದಾರರ ಸ್ವತ್ತುಗಳನ್ನು ನೇರವಾಗಿ ಗುರುತಿಸುವಿಕೆಗೆ ಮತ್ತು ಜಪ್ತಿಗೆ ಪ್ರತ್ಯಕ್ಷವಾಗಿ ಕಾರಣವಾಗುವ ಅಥವಾ ಸ್ವೀಕರಿಸಲಾದ ಠೇವಣಿಗಳ "ಹಣದ ಹರಿವಿಗೆ (ಮನಿ ಟ್ರೇಲ್)" ಸಂಬಂಧಪಟ್ಟ ತಪ್ಪಿತಸ್ಥರ ಸ್ವತ್ತಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಕಾನೂನುಬಾಹಿರ ಕಾರ್ಯಚಟುವಟಿಕೆಗಳನ್ನು ಬಹಿರಂಗಪಡಿಸುವ ಮೂಲ ಮಾಹಿತಿಯನ್ನು ಒದಗಿಸಿದರೆ ಆತನನ್ನು ಯೋಜನೆಯ ಅನುಸಾರವಾಗಿ ಇನಾಮು/ಬಹುಮಾನಕ್ಕೆ ಅರ್ಹನಾದ ಮಾಹಿತಿದಾರನೆಂದು ಪರಿಗಣಿಸತಕ್ಕದ್ದು.

(3) ಮಾಹಿತಿದಾರನು ಹಾಗೆ ಒದಗಿಸಿದ ಮಾಹಿತಿಗನುಸಾರವಾಗಿ ಸ್ವತ್ತಿನ ಮಾರಾಟದ ಉತ್ಪನ್ನಗಳ ನಗದೀಕರಣದಿಂದ ಬಾಕಿಗಳ ವಸೂಲಿ ಮಾಡಬಹುದಾದ ಪ್ರಕರಣಗಳಿಗೆ ಮಾತ್ರ ಇನಾಮು/ಬಹುಮಾನದ ಕ್ಲೇಮು ಸೀಮಿತವಾಗಿರತಕ್ಕದ್ದು. ಒದಗಿಸಲಾದ ಮಾಹಿತಿಯು ಹಣದ ಹರಿವಿಗೆ (ಮನಿ ಟ್ರೇಲ್) ಯುಕ್ತವಾಗಿ ಸಂಬಂಧಿಸಿದ ಸ್ವತ್ತಿನ ಮಾಲೀಕತ್ವ ಅಥವಾ ವರ್ಗಾವಣೆಯನ್ನು ಸೂಚಿಸುವ ದಾಖಲೆಗಳಿಂದ ಪೂರಕವಾಗಿರಬೇಕು ಮತ್ತು ಅದು ನಿರ್ದಿಷ್ಟವಾಗಿದ್ದು, ಕ್ರಮಬದ್ಧವಾಗಿರತಕ್ಕದ್ದು.

5. ಮಾಹಿತಿ ಸಲ್ಲಿಕೆ.- (1) ಮಾಹಿತಿದಾರನು ನಮೂನೆ-೨ರಲ್ಲಿನ ಹೇಳಿಕೆ ಅಥವಾ ಘೋಷಣೆಯೊಂದಿಗೆ ನಮೂನೆ-೧ರಲ್ಲಿ ಮಾಹಿತಿಯನ್ನು "ವಸೂಲಿ ವ್ಯವಹರಣೆಗಳ ಅಡಿಯಲ್ಲಿ

ಇನಾಮು/ಬಹುಮಾನ ನೀಡುವುದಕ್ಕಾಗಿ ಮಾಹಿತಿ" - ಎಂದು ಬರೆದು ಮೊಹರು ಮಾಡಿದ ಲಕೋಟೆಯಲ್ಲಿ ಖುದ್ದಾಗಿ ಮಾಹಿತಿದಾರ ಇನಾಮು/ಬಹುಮಾನ ಸಮಿತಿಗೆ ಸಲ್ಲಿಸತಕ್ಕದ್ದು.

(2) ಮಾಹಿತಿಯು ಇನಾಮು/ಬಹುಮಾನದ ಕ್ಲೇಮಿನಿಂದ ಲಗತ್ತಾಗಿರದಿದ್ದರೆ, ಅದನ್ನು ಈ ಉದ್ದೇಶಕ್ಕಾಗಿ ಅಧಿಸೂಚಿಸಲಾಗುವ ಅಧಿಕೃತ ವಿಶೇಷ ಇ-ಮೇಲ್ ಐಡಿ ಮುಖಾಂತರ ಆನ್‌ಲೈನ್‌ನಲ್ಲಿ ಸಲ್ಲಿಸಬಹುದು.

6. ಮಾಹಿತಿ ಪರಿಶೀಲನೆ.- (1) ಮೂಲ ಮಾಹಿತಿಯನ್ನು ಸ್ವೀಕರಿಸಿದ ತರುವಾಯ, ಮಾಹಿತಿದಾರ ಇನಾಮು/ಬಹುಮಾನ ಸಮಿತಿಯು ಮಾಹಿತಿಯಲ್ಲಿ ನೀಡಲಾದ ವಿವರಗಳನ್ನು ಪರಿಶೀಲಿಸತಕ್ಕದ್ದು. ವಿವರಗಳು ನಿಗದಿತ ನಮೂನೆಗಳಲ್ಲಿ ಸಂಪೂರ್ಣವಾಗಿದ್ದರೆ, ಮಾಹಿತಿದಾರ ಇನಾಮು/ಬಹುಮಾನ ಸಮಿತಿಯು ಸದರಿ ಉದ್ದೇಶಕ್ಕಾಗಿ ಇಟ್ಟಿರುವ ರಿಜಿಸ್ಟರ್‌ನಲ್ಲಿ ಮಾಹಿತಿಯನ್ನು ನಮೂದಿಸತಕ್ಕದ್ದು ಅಥವಾ ನಮೂದಿಸುವಂತೆ ಮಾಡತಕ್ಕದ್ದು. ಒಂದು ವೇಳೆ ವಿವರಗಳನ್ನು ನಿಗದಿತ ನಮೂನೆಗಳಲ್ಲಿ ಸಲ್ಲಿಸದಿದ್ದ ಅಥವಾ ಮಾಹಿತಿ ಅಪೂರ್ಣವಾಗಿದ್ದ ಸಂದರ್ಭದಲ್ಲಿ, ಮಾಹಿತಿದಾರ ಇನಾಮು/ಬಹುಮಾನ ಸಮಿತಿಯು ಅಂಥ ಅಪೂರ್ಣ ವಿವರಗಳನ್ನು ಸ್ವೀಕರಿಸಿದಂದಿನಿಂದ ಒಂದು ವಾರದೊಳಗೆ ನಿಗದಿಪಡಿಸಲಾದಂತೆ ಸಂಪೂರ್ಣ ವಿವರಗಳನ್ನು ನೀಡುವಂತೆ ಮಾಹಿತಿದಾರನಿಗೆ ತಿಳಿಸತಕ್ಕದ್ದು. ಸಂಪೂರ್ಣ ವಿವರಗಳನ್ನು ಸ್ವೀಕರಿಸಿದ ಮತ್ತು ರಿಜಿಸ್ಟರ್‌ನಲ್ಲಿ ಆ ವಿವರವನ್ನು ನಮೂದಿಸಿದ ತರುವಾಯ, ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರವು ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸಕ್ಷಮ ಪ್ರಾಧಿಕಾರಕ್ಕೆ ದಸ್ತಾವೇಜುಗಳು ಮತ್ತು ನಮೂನೆಗಳೊಂದಿಗೆ ಹಾಗೆ ಸ್ವೀಕರಿಸಿದ ಮಾಹಿತಿಯನ್ನು ಒಂದು ವಾರದೊಳಗೆ ಕಳುಹಿಸತಕ್ಕದ್ದು.

(2) ಈ ಪ್ರಕರಣದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಕ್ಷಮ ಪ್ರಾಧಿಕಾರವು ಸಂಪೂರ್ಣ ಮಾಹಿತಿಯನ್ನು ಸ್ವೀಕರಿಸಿದ ತರುವಾಯ, ಅದನ್ನು ಕ್ರಮ ಕೈಗೊಳ್ಳಬಹುದಾದ ಮಾಹಿತಿಯ ಸ್ವರೂಪವನ್ನು ನಿರ್ಧರಿಸಲು ಮತ್ತಷ್ಟು ಪರಿಶೀಲಿಸತಕ್ಕದ್ದು. ಈ ಹಂತದಲ್ಲಿ, ಸಕ್ಷಮ ಪ್ರಾಧಿಕಾರವು ಸ್ವತ್ತಿನ ಮೌಲ್ಯೀಕರಣ ಮಾಡಿಸತಕ್ಕದ್ದು ಮತ್ತು ಸ್ವತ್ತಿನ ಕಾನೂನು ಸ್ವಾಮ್ಯತ್ವವನ್ನು ಖಾತರಿಪಡಿಸಿಕೊಳ್ಳತಕ್ಕದ್ದು ಹಾಗೂ ಪೂರ್ವಾಧಿಕಾರಗಳು ಯಾವುದಾದರೂ ಇದ್ದರೆ, ಅವುಗಳ ಬಗ್ಗೆ ಮಾಹಿತಿಯನ್ನು ಪಡೆಯತಕ್ಕದ್ದು. ಮಾಹಿತಿದಾರನು ಸಕ್ಷಮ ಪ್ರಾಧಿಕಾರಕ್ಕೆ ಅಗತ್ಯವಿರುವ ಮತ್ತಷ್ಟು ದಸ್ತಾವೇಜುಗಳು ಅಥವಾ ಮಾಹಿತಿ ಒದಗಿಸುವುದು ಅಥವಾ ನೆರವು ನೀಡುವುದು ಯಾವುದಾದರೂ ಇದ್ದರೆ, ಅದನ್ನು ಒದಗಿಸತಕ್ಕದ್ದು.

(3) ತರುವಾಯ, ಸಕ್ಷಮ ಪ್ರಾಧಿಕಾರವು ವಿವರಗಳನ್ನು ಮಾಹಿತಿದಾರ ಇನಾಮು/ಬಹುಮಾನ ಸಮಿತಿಗೆ ನೇರವಾಗಿ ಸಲ್ಲಿಸತಕ್ಕದ್ದು. ದಸ್ತಾವೇಜುಗಳೊಂದಿಗೆ ಮೂಲ ಮಾಹಿತಿಯನ್ನು ಪ್ರಕರಣದ ಕುರಿತು

ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ವಸೂಲಿ ಅಧಿಕಾರಿಯು ಅಗತ್ಯಪಡಿಸಲಾದಂತೆ, ಅಂಥ ಅಧಿಕಾರಿಯ ಸುರಕ್ಷಿತ ಅಭಿರಕ್ಷೆಯಲ್ಲಿ ಇಡತಕ್ಕದ್ದು.

(4) ಮಾಹಿತಿದಾರನಿಗೆ ಒಂದು ಮಾಹಿತಿ ಸಂಕೇತವನ್ನು ಗೊತ್ತುಮಾಡತಕ್ಕದ್ದು, ಅದು ರಹಸ್ಯವಾಗಿರತಕ್ಕದ್ದು ಹಾಗೂ ಎಲ್ಲಾ ಪತ್ರವ್ಯವಹಾರಗಳು ಮತ್ತು ದಸ್ತಾವೇಜುಗಳು ಸದರಿ ಮಾಹಿತಿದಾರ ಸಂಕೇತದ ಅನುಸಾರವಾಗಿರತಕ್ಕದ್ದು.

(5) ಮಾಹಿತಿದಾರನು ಇನಾಮು/ಬಹುಮಾನ ನಿರೀಕ್ಷೆಯಲ್ಲಿ ಮೂಲ ಮಾಹಿತಿಯನ್ನು ಒದಗಿಸಿದ್ದರೆ, ಮಾಹಿತಿದಾರನು ತನ್ನ ಗುರುತು ಮತ್ತು ಹಾಗೆ ಒದಗಿಸಿದ ಮಾಹಿತಿಯ ಸತ್ಯಾಸತ್ಯತೆಯನ್ನು ಖಾತರಿಪಡಿಸುವ ಉದ್ದೇಶಕ್ಕಾಗಿ ನಮೂನೆ ೧ ಮತ್ತು ೨ಕ್ಕೆ ಮೇಲುರುಜು ಹಾಕಲು ಕರೆದಾಗ, ಮಾಹಿತಿದಾರನ ಇಚ್ಛಾನುಸಾರ ಮಾಹಿತಿ ಇನಾಮು/ಬಹುಮಾನ ಸಮಿತಿ ಅಥವಾ ಸಕ್ಷಮ ಪ್ರಾಧಿಕಾರ ಅಥವಾ ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟ್ ಮುಂದೆ ಹಾಜರಾಗುವುದು ಅಗತ್ಯವಾಗಿರತಕ್ಕದ್ದು. ಮಾಹಿತಿದಾರನು ಹಾಜರಾಗಲು ನಿರಾಕರಿಸಿದರೆ ಅಥವಾ ಅಗತ್ಯವಿರುವ ಮಾಹಿತಿ ಅಥವಾ ದಸ್ತಾವೇಜು ಇತ್ಯಾದಿಗಳನ್ನು ಒದಗಿಸಲು ನಿರಾಕರಿಸಿದರೆ, ಆಗ ಯಾವುದೇ ಇನಾಮು/ಬಹುಮಾನವನ್ನು ನೀಡತಕ್ಕದ್ದಲ್ಲ.

7. ಮಾಹಿತಿದಾರನ ಮುಚ್ಚಳಿಕೆ.- ಮಾಹಿತಿದಾರನು ಇನಾಮು/ಬಹುಮಾನ ಪಡೆಯುವ ನಿರೀಕ್ಷೆಯಲ್ಲಿ ಯಾವುದೇ ಮಾಹಿತಿ ಅಥವಾ ದಸ್ತಾವೇಜುಗಳನ್ನು ನೀಡಿದರೆ, ಆತನಿಂದ ನಮೂನೆ-IIರ ಭಾಗದಲ್ಲಿ ಈ ಕೆಳಕಂಡಂತೆ ಎಂದರೆ:-

(1) ತಾನು ನೀಡಿರುವ ಮಾಹಿತಿ ಅಥವಾ ದಸ್ತಾವೇಜುಗಳು ಆ ಸಂಗತಿ ನಿಮಿತ್ತವೇ ತನಗೆ ಯಾವುದೇ ಇನಾಮು/ಬಹುಮಾನದ ಹಕ್ಕನ್ನು ನೀಡಿರುವುದಿಲ್ಲ ಎಂಬುದರ ಬಗ್ಗೆ ಮತ್ತು ಈ ನಿಟ್ಟಿನಲ್ಲಿ ಮಾಹಿತಿ ಇನಾಮು/ಬಹುಮಾನ ಪ್ರಾಧಿಕಾರದ ನಿರ್ಧಾರಕ್ಕೆ ತಾನು ಬದ್ಧನಾಗಿರತಕ್ಕದ್ದು ಎಂಬ ಅರಿವು ತನಗಿದೆ ಎಂಬುದರ ಬಗ್ಗೆ;

(2) ಇನಾಮು/ಬಹುಮಾನದ ಪ್ರಮಾಣವು ಮಾಹಿತಿಯ ನಿಖರತೆ ಮತ್ತು ತಾನು ಒದಗಿಸಿದ ದಸ್ತಾವೇಜುಗಳನ್ನಾಧರಿಸಿ ಸ್ವತ್ತಿನಿಂದ ನಗದೀಕರಿಸಲಾದ ಮೌಲ್ಯದ ಮೇಲೆ ಅವಲಂಬಿಸಿರುತ್ತದೆ ಎಂಬ ಅರಿವು ತನಿಗಿದೆ ಎಂಬುದರ ಬಗ್ಗೆ;

(3) ಅವಶ್ಯಕತೆವಿರುವಾಗಲೆಲ್ಲ, ತಾನು ಮತ್ತಷ್ಟು ದಸ್ತಾವೇಜುಗಳು ಅಥವಾ ಮಾಹಿತಿಯನ್ನು ಒದಗಿಸತಕ್ಕದ್ದು ಅಥವಾ ನೆರವನ್ನು ನೀಡತಕ್ಕದ್ದು ಎಂಬುದರ ಬಗ್ಗೆ;

(4) ಆ ಇನಾಮು/ಬಹುಮಾನ ತಾನು ಪೂರೈಸಿದ ಮಾಹಿತಿಗೆ ನೇರವಾಗಿ ಹೇಳಬಹುದಾದಂಥ ವಸೂಲಾದ ಅಥವಾ ನಗದೀಕರಿಸಲಾದ ಬಾಕಿಗಳಿಗೆ ಮಾತ್ರ ಸಂಬಂಧಿಸಿರತಕ್ಕದ್ದು ಎಂಬುದರ ಬಗ್ಗೆ;

(5) ಭಾರತೀಯ ನ್ಯಾಯ ಸಂಹಿತೆ, **2023 (2023**ರ ಕೇಂದ್ರ ಅಧಿನಿಯಮ **45)**ರ **212, 217** ಮತ್ತು **248**ನೇ ಪ್ರಕರಣಗಳ ಉಪಬಂಧಗಳನ್ನು ನಾನು ಓದಿಕೊಂಡಿದ್ದೇನೆ ಅಥವಾ ನನಗೆ ವಿವರಿಸಲಾಗಿದೆ ಹಾಗೂ ತಾನು ಒದಗಿಸಿದ ಮಾಹಿತಿ ಸುಳ್ಳಾಗಿದ್ದರೆ ಮತ್ತು ಆ ಮಾಹಿತಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾರೇ ಇತರ ವ್ಯಕ್ತಿಗೆ ಹಾನಿ ಅಥವಾ ನಷ್ಟವನ್ನುಂಟುಮಾಡುವ ಉದ್ದೇಶವನ್ನು ಹೊಂದಿದ್ದರೆ, ಆಗ ತಾನು ಕಾನೂನುಕ್ರಮಕ್ಕೆ (ಪ್ರಾಸಿಕ್ಯೂಷನ್) ಗುರಿಯಾಗುತ್ತೇನೆ ಎಂಬುದರ ಬಗ್ಗೆ;

(6) ತನ್ನ ಮಾಹಿತಿಯ ಪರಿಣಾಮವಾಗಿ ಯಾವುದೇ ವಸೂಲಾತಿಯ ವಿವರಗಳಿಗೆ ಸಂಬಂಧಿಸಿದಂತೆ ಯಾವುದೇ ಪತ್ರವ್ಯವಹಾರವನ್ನು ನಡೆಸುವ ಯಾವುದೇ ಬಾಧ್ಯತೆ "ಮಾಹಿತಿ ಇನಾಮು/ಬಹುಮಾನ ಪ್ರಾಧಿಕಾರ"ಕ್ಕೆ ಇರುವುದಿಲ್ಲ ಎಂಬುದನ್ನು ತಾನು ಒಪ್ಪಿಕೊಂಡಿರುತ್ತೇನೆ ಎಂಬುದರ ಬಗ್ಗೆ;

(7) ಇನಾಮು/ಬಹುಮಾನಗಳನ್ನು ನೀಡುವ ಸಕ್ಷಮ ಪ್ರಾಧಿಕಾರದ ವಿವೇಚನಾನುಸಾರ ಅನುಗ್ರಹ ಪೂರ್ವಕ ಹಣ ಸಂದಾಯದ ಇನಾಮು/ಬಹುಮಾನ ಎಂಬುದನ್ನು ತಾನು ಒಪ್ಪಿಕೊಳ್ಳುತ್ತೇನೆ ಮತ್ತು ತಾನು ಈ ನಿರ್ಧಾರದ ಸರಿತನದ ಬಗ್ಗೆ ಯಾವುದೇ ಕಾನೂನು ನ್ಯಾಯಾಲಯದಲ್ಲಿ ಪ್ರಶ್ನಿಸುವ ಹಕ್ಕು ತನಗೆ ಇರುವುದಿಲ್ಲ ಎಂಬುದರ ಬಗ್ಗೆ;

(8) ತಾನು ಒದಗಿಸಿದ ಮಾಹಿತಿಯು ಈ ಯೋಜನೆಯಲ್ಲಿ ಅರ್ಥೈಸಿಕೊಳ್ಳಲಾದಂತೆ ಮೂಲ ಮಾಹಿತಿಯಾಗಿದೆ ಎಂಬುದರ ಬಗ್ಗೆ;

(9) ತಾನು ಹಣಕಾಸು ಸಂಸ್ಥೆಯ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗಿರುವ ವ್ಯಕ್ತಿಯಲ್ಲ ಎಂಬುದರ ಬಗ್ಗೆ;

(10) ತಾನು ಬಹಿರಂಗಪಡಿಸುವಿಕೆಯ ಯಾವುದೇ ವಿಷಯವು ತಪ್ಪಿತಸ್ಥ ಹಣಕಾಸು ಸಂಸ್ಥೆಯೊಂದಿಗೆ ಶಾಮೀಲಾಗಿರದ ಅಥವಾ ಒಪ್ಪಂದ ಮಾಡಿಕೊಳ್ಳದ ಠೇವಣಿದಾರರ ಪ್ರಯೋಜನಕ್ಕಾಗಿಯೇ ಹೊರತು, ತನ್ನ ವೈಯಕ್ತಿಕ ಲಾಭಕ್ಕಾಗಿ ಅಲ್ಲ ಎಂಬುದರ ಬಗ್ಗೆ;

- ಲಿಖಿತ ಮುಚ್ಚಳಿಕೆಯನ್ನು ಪಡೆಯತಕ್ಕದ್ದು.

8. ಇನಾಮು/ಬಹುಮಾನದ ಮೊತ್ತ

(1) ಬಾತ್ಮೀದಾರನ ಇನಾಮು/ಬಹುಮಾನವನ್ನು ಒಂದೇ ಹಂತದಲ್ಲಿ ಮಂಜೂರು ಮಾಡಬೇಕು. ಇನಾಮು/ಬಹುಮಾನದ ಮೊತ್ತವು ಅಧಿನಿಯಮದ ಅಡಿಯಲ್ಲಿ ಕ್ರಮವನ್ನು ಕೈಗೊಳ್ಳಲು ಕಾರಣವಾದ ಬಾತ್ಮೀದಾರನು ನೀಡಿದ/ ಆತನಿಂದ ಸ್ವೀಕರಿಸಿದ ಮೂಲ ಮಾಹಿತಿಯ ಮೇಲೆ ಅವಲಂಬಿತವಾಗಿರತಕ್ಕದ್ದು

ಮತ್ತು ಇನಾಮು/ಬಹುಮಾನದ ಮೊತ್ತವು "ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರ"ದಿಂದ ಅನುಮೋದನೆಗೊಂಡಿರತಕ್ಕದ್ದು ಹಾಗೂ ರೂ. 2,00,000 (ಎರಡು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಮೀರತಕ್ಕದ್ದಲ್ಲ.

(2) ಮಾಹಿತಿದಾರನಿಗೆ ಇನಾಮು/ಬಹುಮಾನ ಮೊತ್ತ,-

(i) ಮಾಹಿತಿದಾರನಿಗೆ ಇನಾಮು/ಬಹುಮಾನವನ್ನು ಎರಡು ಹಂತಗಳಲ್ಲಿ ಎಂದರೆ, ಮಧ್ಯಂತರ ಮತ್ತು ಅಂತಿಮ ಹಂತಗಳಲ್ಲಿ ಮಂಜೂರು ಮಾಡಬಹುದು. ಮಧ್ಯಂತದ ಇನಾಮು/ಬಹುಮಾನ ಮೊತ್ತವು ಕಾಲಕಾಲಕ್ಕೆ ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರವು ಅನುಮೋದಿಸಿದ ಹಾಗೆ, ಮಾಹಿತಿಯನ್ನು ಯಾವ ಸ್ವತ್ತಿನ ಕುರಿತು ಒದಗಿಸಲಾಗಿದೆಯೋ ಆ ಸ್ವತ್ತಿನ ಮೀಸಲು ಬೆಲೆಯ ಎರಡು ಪ್ರತಿಶತಕ್ಕೆ ಮೀರದ ಅಥವಾ ರೂ. 2,00,000 (ಎರಡು ಲಕ್ಷ ರೂಪಾಯಿಗಳು ಮಾತ್ರ)ಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಆಗಿರತಕ್ಕದ್ದು.

(ii) ಅಂತಿಮ ಇನಾಮು/ಬಹುಮಾನ ಮೊತ್ತವು, ವಸೂಲು ಮಾಡಿದ ಮತ್ತು ಮಾಹಿತಿದಾರ ಒದಗಿಸಿದ ಮೂಲ ಮಾಹಿತಿಯಿಂದ ವಸೂಲಾದ ಬಾಕಿ ಮೊತ್ತದ ಐದು ಪ್ರತಿಶತ ಮೀರದ ಅಥವಾ ರೂ. 5,00,000 (ಐದು ಲಕ್ಷ ರೂಪಾಯಿಗಳು ಮಾತ್ರ)ಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅಥವಾ ಕಾಲಕಾಲಕ್ಕೆ ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರವು ಅನುಮೋದಿಸಿದ ಅಂತಹ ಯಾವುದೇ ಹೆಚ್ಚಿನ ಮೊತ್ತದಷ್ಟಿರತಕ್ಕದ್ದು.

9. ಇನಾಮು/ ಬಹುಮಾನದ ಹಂತ.- (1) ಯಾವ ಸ್ವತ್ತಿನ ಬಗ್ಗೆ ಮಾಹಿತಿಯನ್ನು ಒದಗಿಸಲಾಗಿದೆಯೋ ಆ ಸ್ವತ್ತಿನ ಮೇಲೆ ಋಣಭಾರವಿಲ್ಲವೆಂದು ಕಂಡುಬಂದಲ್ಲಿ ಮತ್ತು ಜಪ್ತಿ ಮಾಡಿದ ನಂತರ ಅದರ ಮೀಸಲು ಬೆಲೆಯನ್ನು ನಿಗದಿಪಡಿಸಿದಲ್ಲಿ ಮಾತ್ರ ಮಧ್ಯಂತರ ಇನಾಮು/ ಬಹುಮಾನಕ್ಕಾಗಿ ಯಾವುದೇ ಪ್ರಸ್ತಾವನೆ ಅಥವಾ ಶಿಫಾರಸನ್ನು ಸಲ್ಲಿಸಬಹುದು ಮತ್ತು ಅನುಮೋದನೆಯನ್ನು ನೀಡಬಹುದು.

(2) ಯಾವ ಸ್ವತ್ತಿನ ಬಗ್ಗೆ ಮಾಹಿತಿಯನ್ನು ಒದಗಿಸಲಾಗಿದೆಯೋ ಆ ಸ್ವತ್ತಿನ ಮೇಲೆ ಋಣಭಾರ ಇದೆ ಎಂದು ಕಂಡುಬಂದಲ್ಲಿ ಮಾತ್ರ ಮಧ್ಯಂತರ ಇನಾಮು/ ಬಹುಮಾನಕ್ಕಾಗಿ ಯಾವುದೇ ಪ್ರಸ್ತಾವನೆ ಅಥವಾ ಶಿಫಾರಸನ್ನು ಸಲ್ಲಿಸಬಹುದು ಮತ್ತು ಅನುಮೋದನೆಯನ್ನು ನೀಡಬಹುದು ಮತ್ತು ನಂತರ ಆ ನಿರ್ದಿಷ್ಟ ಸ್ವತ್ತುಗಳ (ಋಣಭಾರ ಇಲ್ಲದ ಮೀಸಲು ಮೌಲ್ಯ ಯಾವುದಾದರೂ ಇದ್ದರೆ) ಉಳಿದಿರುವ

ನಗದೀಕರಿಸಬಹುದಾದ ಮೌಲ್ಯದ ಆಧಾರದ ಮೇಲೆ ಇನಾಮು/ಬಹುಮಾನದ ಮೊತ್ತವನ್ನು ನಿರ್ಧರಿಸತಕ್ಕದ್ದು.

(3) ಯಾವ ಸ್ವತ್ತಿನ ಕುರಿತು ಮಾಹಿತಿಯನ್ನು ಸ್ವೀಕರಿಸಲಾಗಿದೆಯೋ ಆ ಸ್ವತ್ತಿನ ಮಾರಾಟದ ನಂತರ ಬಂದ ನಗದೀಕರಣದ ತರುವಾಯ ಅಂತಿಮ ಇನಾಮು/ಬಹುಮಾನಕ್ಕಾಗಿ ಯಾವುದೇ ಪ್ರಸ್ತಾವನೆ ಅಥವಾ ಶಿಫಾರಸನ್ನು ಸಲ್ಲಿಸಬಹುದು ಮತ್ತು ಅನುಮೋದನೆಯನ್ನು ನೀಡಬಹುದು.

10. ಅನುಗ್ರಹ ಸಂದಾಯದ ರೂಪದಲ್ಲಿ ಇನಾಮು/ಬಹುಮಾನ._ (1) ಈ ಯೋಜನೆಗಳಿಗೆ ಅನುಸಾರವಾಗಿ ಇನಾಮು/ಬಹುಮಾನ ನೀಡುವುದು ವಿವೇಚನೆಗೆ ಒಳಪಟ್ಟಿರತಕ್ಕದ್ದು ಮತ್ತು ಈ ಯೋಜನೆಯ ಉಪಬಂಧಗಳಿಗೊಳಪಟ್ಟು ಅನುಗ್ರಹ ಸಂದಾಯದ ಸ್ವರೂಪದಲ್ಲಿರತಕ್ಕದ್ದು ಮತ್ತು ಇನಾಮು/ಬಹುಮಾನವನ್ನು ಸಕ್ಷಮ ಪ್ರಾಧಿಕಾರದ ವಿವೇಚನೆಯ ಅನುಸಾರ ಮಂಜೂರು ಮಾಡತಕ್ಕದ್ದು. "ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರ" ದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(2) ಈ ಯೋಜನೆಯ ಅಡಿಯಲ್ಲಿನ ಇನಾಮು/ಬಹುಮಾನವನ್ನು ಮಾಹಿತಿದಾರನು ಯಾರೇ ಇತರೆ ವ್ಯಕ್ತಿಗೆ ವರ್ಗಾಯಿಸತಕ್ಕದ್ದಲ್ಲ. ಆದಾಗ್ಯೂ, "ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರ"ವು ಇನಾಮು/ ಬಹುಮಾನವನ್ನು ಪಾವತಿಸುವ ಮೊದಲೇ ಮಾಹಿತಿದಾರನು ಮರಣ ಹೊಂದಿದ ಸಂದರ್ಭದಲ್ಲಿ, ಅವನ ವಾರಸುದಾರರಿಗೆ ಅಥವಾ ನಾಮನಿರ್ದೇಶಿತರಿಗೆ ಇನಾಮು/ಬಹುಮಾನವನ್ನು ನೀಡಬಹುದು.

11. ಮಾಹಿತಿದಾರ ಇನಾಮು/ಬಹುಮಾನ ಸಮಿತಿಯ ರಚನೆ ಮತ್ತು ಪ್ರಕಾರ್ಯಗಳು._ (1) ಇನಾಮು/ಬಹುಮಾನದ ಅರ್ಹತೆ ಮತ್ತು ಅದರ ಮೊತ್ತವನ್ನು ಶಿಫಾರಸು ಮಾಡುವ ಉದ್ದೇಶಕ್ಕಾಗಿ, ಈ ವಿಷಯವಾಗಿ ಅಧಿಕಾರ ವ್ಯಾಪ್ತಿ ಹೊಂದಿರುವ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ಈ ಸಮಿತಿಯ ಮುಖ್ಯಸ್ಥರಾಗಿರುವ, ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರದಿಂದ ನಾಮನಿರ್ದೇಶನಗೊಂಡ ಜಿಲ್ಲೆಯ ಅಥವಾ ತಾಲ್ಲೂಕಿನ ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಆಯಾ ಉಪವಿಭಾಗದ ಲೆಕ್ಕಾಧಿಕಾರಿಗಳು ಇದರ ಸದಸ್ಯರಾಗಿರುವ ಮಾಹಿತಿದಾರ ಇನಾಮು/ಬಹುಮಾನ ಸಮಿತಿಯನ್ನು ರಚಿಸತಕ್ಕದ್ದು.

(2) ಮಾಹಿತಿದಾರ ಇನಾಮು/ಬಹುಮಾನ ಸಮಿತಿಯು ಈ ಮುಂದಿನ ವಿಷಯಗಳ ಬಗ್ಗೆ, ಎಂದರೆ:

(i) ಇನಾಮು/ಬಹುಮಾನ ಪಡೆಯಲು ಬಾತ್ಮೀದಾರ ಅಥವಾ ಮಾಹಿತಿದಾರನ ಅರ್ಹತೆ;

(ii) ಬಾತ್ಮೀದಾರ ಅಥವಾ ಮಾಹಿತಿದಾರನಿಗೆ ಸಂದಾಯ ಮಾಡಬೇಕಾದ ಇನಾಮು/ಬಹುಮಾನ ಮೊತ್ತದ ನಿರ್ಧರಣೆ ಕುರಿತು ಮಾಹಿತಿದಾರನ ಇನಾಮು/ಬಹುಮಾನ ಪ್ರಾಧಿಕಾರಕ್ಕೆ ಶಿಫಾರಸುಗಳನ್ನು ಮಾಡತಕ್ಕದ್ದು.

12. ಇನಾಮು/ಬಹುಮಾನ ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರ._ ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರವು ಈ ಸಂಬಂಧವಾಗಿ ಆದೇಶವನ್ನು ಹೊರಡಿಸುವ ಮೂಲಕ ಇನಾಮು/ ಬಹುಮಾನವನ್ನು ನೀಡಲು ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು ಮತ್ತು ಯೋಜನೆಯ ಎಲ್ಲಾ ಉದ್ದೇಶಗಳಿಗಾಗಿ ಸರ್ಕಾರದಿಂದ ನೇಮಕಗೊಂಡ ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರ**(ಎಸ್.ಪಿ.ಎಲ್.ಓ.ಸಿ.ಎ.)** ಆಗಿರತಕ್ಕದ್ದು. ಸಕ್ಷಮ ಪ್ರಾಧಿಕಾರವು ಮಾಹಿತಿದಾರ ಇನಾಮು/ಬಹುಮಾನ ಸಮಿತಿಯು ಮಾಡಿದ ಶಿಫಾರಸಿನ ಆಧಾರದ ಮೇಲೆ ಆದೇಶವನ್ನು ಹೊರಡಿಸತಕ್ಕದ್ದು.

13. ಇನಾಮು/ಬಹುಮಾನ ಮೊತ್ತವನ್ನು ನಿರ್ಧರಿಸುವ ಸಂದರ್ಭಗಳು.- ಮಾಹಿತಿದಾರ ಇನಾಮು/ಬಹುಮಾನ ಸಮಿತಿಯು ಇನಾಮು/ಬಹುಮಾನ ಮೊತ್ತವನ್ನು ಶಿಫಾರಸು ಮಾಡುವ ಸಂದರ್ಭದಲ್ಲಿ ಈ ಮುಂದಿನವುಗಳನ್ನು ಪರಿಗಣಿಸತಕ್ಕದ್ದು, ಎಂದರೆ,

(1) ಬಾತ್ಮೀದಾರ ಅಥವಾ ಮಾಹಿತಿದಾರನು ಒದಗಿಸಿದ ದಾಖಲೆಗಳ ಸತ್ಯಾಸತ್ಯತೆಗೆ ಸೀಮಿತಗೊಳಿಸದೆ ನೀಡಿದ ಮಾಹಿತಿಯ ನಿಖರತೆ;

(2) ಖಂಡ 2 (ಐ)ಯ ಅರ್ಥವ್ಯಾಪ್ತಿಯೊಳಗೆ ಮಾಹಿತಿಯ ನೈಜತೆ;

(3) ಬಾತ್ಮೀದಾರ ಅಥವಾ ಮಾಹಿತಿದಾರನು ಹಣಕಾಸು ಸಂಸ್ಥೆಯೊಂದಿಗೆ ಶಾಮೀಲಾಗಿದ್ದಾನೆಯೇ ಎಂಬುದರ ಬಗೆಗಿನ ನಿರ್ದಿಷ್ಟ ಉಲ್ಲೇಖದೊಂದಿಗೆ ಬಾತ್ಮೀದಾರ ಅಥವಾ ಮಾಹಿತಿದಾರನು ಒದಗಿಸಿದ ಮಾಹಿತಿಯ ಪ್ರಾಮಾಣಿಕತೆ;

(4) ಬಾತ್ಮೀದಾರ ಅಥವಾ ಮಾಹಿತಿದಾರನು ಒದಗಿಸಿದ ನೆರವಿನ ವ್ಯಾಪ್ತಿ ಮತ್ತು ಸ್ವರೂಪ;

(5) ಮಾಹಿತಿ/ದಾಖಲೆಗಳನ್ನು ಪಡೆದುಕೊಳ್ಳುವಲ್ಲಿ ಮತ್ತು ಒದಗಿಸುವಲ್ಲಿ ಬಾತ್ಮೀದಾರ ಅಥವಾ ಮಾಹಿತಿದಾರನು ಎದುರಿಸಿದ ಅಪಾಯಗಳು ಮತ್ತು ಸಮಸ್ಯೆಗಳು ಹಾಗೂ ವಹಿಸಿದ ಖರ್ಚು;

(6) ಮಾಹಿತಿಯ ಬಳಕೆಯಲ್ಲಿ ತೊಡಗಿಸಿಕೊಂಡ ಕೆಲಸದ ಪ್ರಮಾಣ; ಮತ್ತು

(7) ಮಾಹಿತಿದಾರನು ಒದಗಿಸಿದ ಮಾಹಿತಿ ಮತ್ತು ದಾಖಲೆಗಳ ನೇರ ಪರಿಣಾಮವಾಗಿ ನಗದೀಕರಿಸಲಾದ ಮೌಲ್ಯದ ಪ್ರಮಾಣ.

14. ಕೆಲವು ಪ್ರಕರಣಗಳಲ್ಲಿ ಇನಾಮು/ ಬಹುಮಾನದ ನಿಷೇಧ._

(1) ಬಾತ್ಮೀದಾರ ಅಥವಾ ಮಾಹಿತಿದಾರನು ಸರ್ಕಾರಿ ನೌಕರನಾಗಿದ್ದು, ಸರ್ಕಾರಿ ನೌಕರನಾಗಿ ತನ್ನ ಕರ್ತವ್ಯ ನಿರ್ವಹಿಸುತ್ತಿರುವ ಕ್ರಮದಲ್ಲಿ ತಾನು ಪಡೆದ ಮಾಹಿತಿ ಅಥವಾ ಸಾಕ್ಷ್ಯವನ್ನು ಒದಗಿಸಿದ್ದರೆ;

ವಿವರಣೆ: ಈ ಖಂಡದ ಉದ್ದೇಶಕ್ಕಾಗಿ ಸರ್ಕಾರಿ ನೌಕರ ಎಂದರೆ, ಕೇಂದ್ರ ಅಥವಾ ಯಾವುದೇ ರಾಜ್ಯ ಅಥವಾ ಯಾವುದೇ ಕೇಂದ್ರಾಡಳಿತ ಪ್ರದೇಶ ಸರ್ಕಾರ ಅಥವಾ ಶಾಸನಬದ್ಧ ಪ್ರಾಧಿಕಾರ ಅಥವಾ ರಾಷ್ಟ್ರೀಕೃತ ಬ್ಯಾಂಕ್ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಯಾವುದೇ ಕೇಂದ್ರಾಡಳಿತ ಪ್ರದೇಶದ ಆಡಳಿತವು ಸ್ಥಾಪಿಸಿದ ಅಥವಾ ಒಡೆತನದ ಯಾವುದೇ ಸಾರ್ವಜನಿಕ ವಲಯ ಉದ್ಯಮ, ನಿಗಮ, ನಿಕಾಯ, ಕಾರ್ಪೊರೇಟ್ ಅಥವಾ ಸ್ಥಾಪಿತ ಸಂಸ್ಥೆಯ ಉದ್ಯೋಗಿಯಾಗಿ ನೇಮಕಗೊಂಡ ವ್ಯಕ್ತಿ.

(2) ಬಾತ್ಮೀದಾರ ಅಥವಾ ಮಾಹಿತಿದಾರನು ಮಾಹಿತಿಯನ್ನು ಬಹಿರಂಗಪಡಿಸುವುದು ಕಾನೂನಿನ ಪ್ರಕಾರ ಅಗತ್ಯವಾಗಿದ್ದರೆ; ಅಥವಾ

(3) ಬಾತ್ಮೀದಾರ ಅಥವಾ ಮಾಹಿತಿದಾರನು ಅಧಿನಿಯಮದ ಪ್ರಕರಣ 3ರ ಅಡಿಯಲ್ಲಿ ಯಾವುದೇ ಪ್ರಾಧಿಕಾರದೊಂದಿಗಿನ ಒಪ್ಪಂದದ ಆಧಾರದ ಮೇಲೆ ಅಥವಾ ಗುತ್ತಿಗೆದಾರನಾಗಿ ಅಥವಾ ನೌಕರನಾಗಿ ಅಥವಾ ಸದರಿ ಪ್ರಾಧಿಕಾರದ ಉದ್ಯೋಗಿಯ ಪರಿಚಿತ ವ್ಯಕ್ತಿ ಅಥವಾ ಸಂಬಂಧಿಯಾಗಿ ಮಾಹಿತಿಯನ್ನು ಪಡೆಯಲಾಗಿದ್ದರೆ;

(4) ಅಧಿನಿಯಮದ ಪ್ರಕರಣ 3ರ ಅಡಿಯಲ್ಲಿ ಯಾರೇ ಇತರ ಬಾತ್ಮೀದಾರ ಅಥವಾ ಮಾಹಿತಿದಾರ ಅಥವಾ ಯಾವುದೇ ಪ್ರಾಧಿಕಾರವು ಈಗಾಗಲೇ ಮಾಹತಿಯನ್ನು ಒದಗಿಸಿದ್ದರೆ;

-ಯಾವುದೇ ಇನಾಮು/ ಬಹುಮಾನವನ್ನು ಮಂಜೂರು ಮಾಡತಕ್ಕದ್ದಲ್ಲ.

15. ಗೌಪ್ಯವಾಗಿಡಬೇಕಾದ ಮಾಹಿತಿ.- ಬಾತ್ಮೀದಾರ ಅಥವಾ ಮಾಹಿತಿದಾರ ಒದಗಿಸಿದ ಮಾಹಿತಿ ಮತ್ತು ಗುರುತು ಅಥವಾ ಅವರಿಗೆ ಪಾವತಿಸಲಾದ ಇನಾಮು/ ಬಹುಮಾನವನ್ನು ಗೌಪ್ಯವಾಗಿಡತಕ್ಕದ್ದು ಮತ್ತು ವಿಶೇಷ ನ್ಯಾಯಾಲಯದ ನಿರ್ದಿಷ್ಟ ಆದೇಶ ಅಥವಾ ನಿರ್ದೇಶನದ ಅನುಸಾರವಾಗಿ ಮತ್ತು ಅಂತಹ ಗೌಪ್ಯತೆಯನ್ನು ಕಾಪಾಡುವ ರೀತಿಯನ್ನು ಹೊರತುಪಡಿಸಿ ಬಹಿರಂಗಪಡಿಸತಕ್ಕದ್ದಲ್ಲ.

16. ಬಾತ್ಮೀದಾರ/ಮಾಹಿತಿದಾರನಿಗೆ ರಕ್ಷಣೆ.- ಸರ್ಕಾರವು ಅಗತ್ಯ ಸಂದರ್ಭದಲ್ಲಿ ಮತ್ತು ನಿರ್ದಿಷ್ಟವಾಗಿ ಬಾತ್ಮೀದಾರ/ಮಾಹಿತಿದಾರನು ಕೋರಿದ್ದಲ್ಲಿ, ಬಾತ್ಮೀದಾರ ಅಥವಾ ಮಾಹಿತಿದಾರನಿಗೆ

ಹಣಕಾಸು ಸಂಸ್ಥೆಯಿಂದ ಯಾವುದೇ ದೈಹಿಕ ಬೆದರಿಕೆ, ಕಿರುಕುಳ ಅಥವಾ ಬಲಿಪಶು ಮಾಡುವಿಕೆಯ ವಿರುದ್ಧ ಬಾತ್ಮೀದಾರ ಅಥವಾ ಮಾಹಿತಿದಾರನಿಗೆ ರಕ್ಷಣೆ ಒದಗಿಸಬಹುದು.

17. ದಾಖಲೆಗಳ ನಿರ್ವಹಣೆ ಮತ್ತು ಸಂವಹನ.-) 1) ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರವು, ಪ್ರತಿಯೊಬ್ಬ ಬಾತ್ಮೀದಾರ ಅಥವಾ ಮಾಹಿತಿದಾರನ ದಾಖಲೆ, ಅವರು ಯಾವ ಪ್ರಕರಣಗಳಲ್ಲಿ ಮಾಹಿತಿಯನ್ನು ಒದಗಿಸಿದ್ದಾರೋ, ಆ ಪ್ರಕರಣಗಳ ವಿವರಗಳು, ಮಾಹಿತಿಯು ಎಷ್ಟರ ಮಟ್ಟಿಗೆ ವಿಶ್ವಾಸಾರ್ಹ ಮತ್ತು ಉಪಯುಕ್ತವೆಂದು ಕಂಡುಬಂದಿದೆ, ಹಿಂದೆ ಮಾಹಿತಿದಾರನಿಗೆ ಪಾವತಿಸಿದ ಇನಾಮು/ ಬಹುಮಾನ ಮುಂತಾದವು, ಯಾವುದಾದರೂ ಇದ್ದರೆ ಅವುಗಳನ್ನು ನಿರ್ವಹಿಸಿಕೊಂಡು ಬರತಕ್ಕದ್ದು;

(2) ಮಾಹಿತಿಯ ನಿರಾಕರಣೆ ಅಥವಾ ಅನುಮೋದನೆಯ ತೀರ್ಮಾನ ಅಥವಾ ಇನಾಮು/ ಬಹುಮಾನದ ಮೊತ್ತ ಯಾವುದಾದರೂ ಇದ್ದರೆ, ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರವು ಈ ಉದ್ದೇಶಕ್ಕಾಗಿ ಇರಿಸಲಾಗಿರುವ ರಿಜಿಸ್ಟರ್‌ನಲ್ಲಿ ದಾಖಲಿಸತಕ್ಕದ್ದು.

(3) ಅಗತ್ಯವೆಂದು ಕಂಡುಬಂದರೆ, ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರವು, ಹಾಗೆ ಒದಗಿಸಲಾದ ಮಾಹಿತಿಯ ಸೂಕ್ತತೆಯನ್ನು ಒಪ್ಪಿಕೊಳ್ಳುವ ಅಥವಾ ಅವರ ಮಾಹಿತಿಯನ್ನು ತಿರಸ್ಕರಿಸಿರುವ ಬಗ್ಗೆ ಸಂಕ್ಷಿಪ್ತ ಕಾರಣಗಳೊಂದಿಗೆ ಅಥವಾ ಪಾವತಿಸಬೇಕಾದ ಇನಾಮು/ಬಹುಮಾನ ಮುಂತಾದವುಗಳ ಬಗ್ಗೆ ಮಾಹಿತಿದಾರನಿಗೆ ತಿಳಿಸಬಹುದು.

18. ಇನಾಮು/ಬಹುಮಾನ.- ಈ ಯೋಜನೆಯಡಿಯಲ್ಲಿ ಬಾತ್ಮೀದಾರ ಅಥವಾ ಮಾಹಿತಿದಾರನಿಗೆ ಮಂಜೂರು ಮಾಡಲಾದ ಇನಾಮು/ ಬಹುಮಾನ ಮೊತ್ತವನ್ನು ಸೂಕ್ತ ಲೆಕ್ಕ ಶೀರ್ಷಿಕೆಯಿಂದ ಪಾವತಿಸತಕ್ಕದ್ದು.

ಥಾವರ್‌ಚಂದ್ ಗೆಹ್ಲೋಟ್
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಡಾ: ವಿಶಾಲ್ ಆರ್
ಸರ್ಕಾರದ ಕಾರ್ಯದರ್ಶಿ,
ಆರ್ಥಿಕ ಇಲಾಖೆ **(**ವಿತ್ತೀಯ ಸುಧಾರಣೆ**)**

ನಮೂನೆ-I

(ನಿಯಮ 2ರ ಖಂಡ) ಎಫ್ (ಮತ್ತು ನಿಯಮ 5ರ ಉಪ-ನಿಯಮ) 1)ನ್ನು ನೋಡಿ(

ಮಾಹಿತಿಯನ್ನು ಒದಗಿಸುವುದಕ್ಕಾಗಿ ಬಾತ್ಮೀದಾರ ಅಥವಾ ಮಾಹಿತಿದಾರನು ಒದಗಿಸಿದ ಹೇಳಿಕೆಯ ನಮೂನೆ

ಕ್ರ ಸಂ.	ವಿವರಣೆಗಳು	ವಿವರಗಳು
1.	ಬಾತ್ಮೀದಾರ ಅಥವಾ ಮಾಹಿತಿದಾರನ ಪೂರ್ಣ ಹೆಸರು (ಒಬ್ಬರಿಗಿಂತ ಹೆಚ್ಚು ಮಾಹಿತಿದಾರರು ಇದ್ದರೆ ಪ್ರತಿಯೊಬ್ಬ ಮಾಹಿತಿದಾರನಿಗೂ ಪ್ರತ್ಯೇಕವಾಗಿ) (ದಪ್ಪ ಅಕ್ಷರಗಳಲ್ಲಿ)	
2.	ತಂದೆಯ ಹೆಸರು	
3.	ಹುಟ್ಟಿದ ದಿನಾಂಕ	
4.	ಬಾತ್ಮೀದಾರ ಅಥವಾ ಮಾಹಿತಿದಾರನ ಖಾಯಂ ವಿಳಾಸ ಪುರಾವೆ ಪ್ರತಿಯೊಂದಿಗೆ	
5.	ಬಾತ್ಮೀದಾರ ಅಥವಾ ಮಾಹಿತಿದಾರನ ಪ್ರಸ್ತುತ ವಿಳಾಸ (ಖಾಯಂ ವಿಳಾಸಕ್ಕಿಂತ ಭಿನ್ನವಾಗಿದ್ದರೆ) ಪುರಾವೆ ಪ್ರತಿಯೊಂದಿಗೆ	
6.	ಸ್ಥಿರ ದೂರವಾಣಿ ಸಂಖ್ಯೆ	
7.	ಮೊಬೈಲ್ ಸಂಖ್ಯೆ	
8.	ಇ-ಮೇಲ್ ಐಡಿ	
9.	ಯಾವುದೇ ಸರ್ಕಾರಿ ಏಜೆನ್ಸಿಗಳು ನೀಡಿದ ಗುರುತಿನ ಚೀಟಿ, ಎಂದರೆ ಪಾಸ್‌ಪೋರ್ಟ್/ಮತದಾರರ ಗುರುತಿನ ಚೀಟಿ ಇತ್ಯಾದಿ ಪುರಾವೆ ಪ್ರತಿಯೊಂದಿಗೆ	
10.	ಪ್ಯಾನ್ ಕಾರ್ಡ ಸಂಖ್ಯೆ ಮತ್ತು ಪ್ಯಾನ್ ಕಾರ್ಡನ ಪ್ರತಿ	
11.	ಬಾತ್ಮೀದಾರ ಅಥವಾ ಮಾಹಿತಿದಾರನ ಕೆಲಸದ ವಿವರಣೆ	
12.	ಯಾರ ಸಂಬಂಧದಲ್ಲಿ ಮಾಹಿತಿಯನ್ನು ಒದಗಿಸಲಾಗಿದೆಯೋ ಆ ತಪ್ಪಿತಸ್ಥನ ಹೆಸರು ಮತ್ತು ವಿಳಾಸ	
13.	ತಪ್ಪಿತಸ್ಥನ ಸ್ವತ್ತುಗಳ ಸ್ವರೂಪ ಮತ್ತು ವ್ಯಾಪ್ತಿಯ ಸಂಪೂರ್ಣ ವಿವರಗಳು	
14.	ಒದಗಿಸಲಾದ ದಸ್ತಾವೇಜುಗಳು/ಮಾಹಿತಿ ಮತ್ತು ವಿವರಗಳ ಪಟ್ಟಿ, ಯಾವುದಾದರೂ ಇದ್ದರೆ	
	(ಎ) ಮೂಲ ಪ್ರತಿಯಲ್ಲಿ	

	(ಬಿ) ನಕಲು ಪ್ರತಿ ಮಾತ್ರ	
15.	ಮಾಹಿತಿಯ ಮೂಲ:	
	(ಎ) ತಪ್ಪಿತಸ್ಥನ ಉದ್ಯೋಗಿ ಅಥವಾ ಸಹವರ್ತಿ ಅಥವಾ ಸಂಬಂಧಿಯಾಗಿದ್ದರಿಂದ ಮಾಹಿತಿಯನ್ನು ವೈಯಕ್ತಿಕವಾಗಿ ಪಡೆಯಲಾಗಿದೆಯೇ?	
	(ಬಿ)ಬೇರೆ ಯಾರೇ ವ್ಯಕ್ತಿಯ ಮೂಲಕ ಮಾಹಿತಿಯನ್ನು ಪಡೆಯಲಾಗಿದೆಯೇ?	
16.	ಸಂಕ್ಷಿಪ್ತವಾಗಿ ತಿಳಿಸಿ (ಯಾವುದಾದರು ಸಾಕ್ಷ್ಯವಿದ್ದರೆ ಲಗತ್ತಿಸಿ)	
	ಎ. ಮಾಹಿತಿಯ ಬಗ್ಗೆ ನಿಮಗೆ ಹೇಗೆ ತಿಳಿಯಿತು?	
	ಬಿ. ಯಾವುದಾದರು ವಿಶೇಷ ಪ್ರಯತ್ನಗಳನ್ನು ಮಾಡಿದ್ದರೆ	
	ಸಿ. ತೆಗೆದುಕೊಂಡ ಅಪಾಯಗಳು ಮತ್ತು ತೊಂದರೆಗಳು	
	ಡಿ. ತಗುಲಿದ ಖರ್ಚುವೆಚ್ಚ ಯಾವುದಾದರು ಇದ್ದರೆ	
17.	ಈ ಮಾರ್ಗಸೂಚಿಗಳ ಅಡಿಯಲ್ಲಿ ಈಗಾಗಲೇ ಮಾಹಿತಿ ಒದಗಿಸಲಾಗಿದೆಯೇ? ಒದಗಿಸಿದ್ದರೆ, ಅದರ ವಿವರಗಳು	
18.	**ಬಾತ್ಮೀದಾರ** ಅಥವಾ ಮಾಹಿತಿದಾರನು ಯಾವುದೇ ಇನಾಮು ನಿರೀಕ್ಷಿಸಿರುವನೇ? (ಹೌದು/ಇಲ್ಲ)	
19.	ಇನಾಮು/ ಬಹುಮಾನ ಪಾವತಿ ಮಾಡಬೇಕಾದ ಬ್ಯಾಂಕ್ ಖಾತೆಯ ವಿವರಗಳು (ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕ್ ಹೆಸರು, ಶಾಖೆ, ಐಎಫ್ಎಸ್ಸಿ ಕೋಡ್, ಫಲಾನುಭಾವಿಗಳ ಹೆಸರು, ಇತ್ಯಾದಿ.)	

ದಿನಾಂಕ: ಬಾತ್ಮೀದಾರ(ರು)/ಮಾಹಿತಿದಾರ(ರು) ಸಹಿ

ಸ್ಥಳ:

ಗುರುತಿನ ಪುರಾವೆ (ಪ್ರತಿಯನ್ನು ಲಗತ್ತಿಸಲಾಗಿದೆ):

ಹಣಕಾಸು ಸಂಸ್ಥೆಯ ವಿವರಗಳು				ಪ್ರತಿ ಹಣಕಾಸು ಸಂಸ್ಥೆಯೊಂದಿಗೆ ಭಾಗಿಯಾಗಿರುವ ವ್ಯಕ್ತಿಗಳ ವಿವರಗಳು			
ಕ್ರ. ಸಂ.	ಹಣಕಾಸು ಸಂಸ್ಥೆಯ ಹೆಸರು (ಯಾವುದೇ ಸಹಾಯಕ ಸಂಸ್ಥೆ / ಅಂಗ ಸಂಸ್ಥೆಗಳು ಒಳಗೊಂಡಂತೆ)	ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದ ದಿನಾಂಕ ತಿಳಿದಿದ್ದರೆ	ಸಂಸ್ಥೆಯ ವಿಧ (ಕಂಪನಿ/ಟ್ರಸ್ಟ್/ ಎಲ್‌ಎಲ್‌ಪಿ/ ಸಹಕಾರಿ/ಇತರೆ)	ಕ್ರ. ಸಂ.	ಮಾಲೀಕ/ ನಿರ್ದೇಶಕ/ ಪ್ರವರ್ತಕ/ ವ್ಯವಸ್ಥಾಪಕ/ ಸದಸ್ಯ ಮುಂತಾದವರ ಹೆಸರು ಇತ್ಯಾದಿ	ವಿಳಾಸ	ಸಂಪರ್ಕ ಸಂಖ್ಯೆ

ಇನಾಮು/ಬಹುಮಾನ ಯೋಜನೆ

ಇನಾಮು/ಬಹುಮಾನ ಯೋಜನೆ (ಚರ ಸ್ವತ್ತುಗಳು)

ಕ್ರ.ಸಂ.	ಹಣಕಾಸು ಸಂಸ್ಥೆಯ ಹೆಸರು (ಯಾವುದೇ ಸಹಾಯಕ ಸಂಸ್ಥೆ/ ಅಂಗ ಸಂಸ್ಥೆಗಳು ಸೇರಿದಂತೆ) ಯಾವುದಾದರು ಇದ್ದರೆ	ಕ್ರ.ಸಂ.	ಅನುಬಂಧ-1ರಲ್ಲಿನ ಮಾಲೀಕ/ ನಿರ್ದೇಶಕ/ ಪ್ರವರ್ತಕ/ ವ್ಯವಸ್ಥಾಪಕ/ ಸದಸ್ಯ ಮುಂತಾದವರ ಹೆಸರು ಇತ್ಯಾದಿ	ಚರ ಸ್ವತ್ತುಗಳು	ವಿವರಣೆ, ವಸ್ತು, ಬಳಕೆ, ಮಾದರಿ ಸಂಖ್ಯೆ, ಪ್ರಮಾಣ	ಸ್ವಾಧೀನದ ದಿನಾಂಕ - ಗೊತ್ತಿದ್ದರೆ	ದುರ್ಭಾವನೆಯಿಂದ ಮಾಡಲಾದ ವರ್ಗಾವಣೆ – ಯಾವುದಾದರು ಇದ್ದರೆ (ವರ್ಗಾವಣೆಧಾರನ ಹೆಸರು ಮತ್ತು ವಿಳಾಸ)	ಬೇನಾಮಿ ವ್ಯವಹಾರ – ಯಾವುದಾದರು ಇದ್ದರೆ (ಪಾವತಿದಾರನ ಹೆಸರು ಮತ್ತು ವಿಳಾಸ)	ಸ್ವತನ್ನು ಇಡಲಾಗಿರುವ ನಿಖರ ಸ್ಥಳ	ಮಾಲೀಕತ್ವದ ದಸ್ತಾವೇಜು – ಯಾವುದಾದರು ಒದಗಿಸಿದ್ದರೆ	ಸವಕಳಿಯ ನಂತರದ ಯುಕ್ತ ನಿವ್ವಳ ಮೌಲ್ಯ

ಇನಾಮು/ ಬಹುಮಾನ ಯೋಜನೆ (ಸ್ಥಿರ ಸ್ವತ್ತುಗಳು)

ಕ್ರ.ಸಂ.	ಅನುಬಂಧ - 1ರಲ್ಲಿನ ಹಣಕಾಸು ಸಂಸ್ಥೆಯ ಹೆಸರು (ಯಾವುದೇ ಸಹಾಯಕ ಸಂಸ್ಥೆ/ ಅಂಗ ಸಂಸ್ಥೆಗಳು ಸೇರಿದಂತೆ)	ಕ್ರ.ಸಂ.	ಅನುಬಂಧ-1ರಲ್ಲಿನ ಮಾಲೀಕ/ ನಿರ್ದೇಶಕ/ ಪ್ರವರ್ತಕ/ ವ್ಯವಸ್ಥಾಪಕ/ ಸದಸ್ಯ ಮುಂತಾದವರ ಹೆಸರು ಇತ್ಯಾದಿ	ಚರ ಸ್ವತ್ತುಗಳು	ವಿವರಣೆ, ವಿಸ್ತಾರ, ನಿರ್ಮಾಣ ಸ್ವರೂಪ (ಮಹಡಿಗಳ ಸಂಖ್ಯೆ ಮತ್ತು ಮಹಡಿಯ ಪ್ರದೇಶ)	ಹಣಕಾಸು ಸಂಸ್ಥೆಯು ಸ್ವಾಧೀನಪಡಿಸಿಕೊಂಡ ದಿನಾಂಕ	ದುರ್ಭಾವನೆಯಿಂದ ಮಾಡಲಾದ ವರ್ಗಾವಣೆ – ಯಾವುದಾದರು ಇದ್ದರೆ (ವರ್ಗಾವಣೆಧಾರನ ಹೆಸರು ಮತ್ತು ವಿಳಾಸ)	ಬೇನಾಮಿ ವ್ಯವಹಾರ – ಯಾವುದಾದರು ಇದ್ದರೆ (ಪಾವತಿದಾರನ ಹೆಸರು ಮತ್ತು ವಿಳಾಸ)	ಸ್ವತ್ತು ನಿರ್ವಹಣೆಯ ನಿಖರ ಸ್ಥಳ	ಮಾಲೀಕತ್ವದ ದಸ್ತಾವೇಜು – ಯಾವುದಾದರು ಒದಗಿಸಿದ್ದರೆ	ಸವಕಳಿಯ ನಂತರದ ಸಂಭವನೀಯ ನಿವ್ವಳ ಮೌಲ್ಯ

ನಮೂನೆ-II

(ನಿಯಮ 5ರ ಉಪ-ನಿಯಮ(1) ಮತ್ತು ನಿಯಮ 7 ಅನ್ನು ನೋಡಿ)

ಬಾತ್ಮೀದಾರ/ ಮಾಹಿತಿದಾರನ ಹೇಳಿಕೆ/ ಘೋಷಣೆ

	ನಾನು/ ನಾವು ಈ ಮೂಲಕ ಘೋಷಿಸುವುದೇನೆಂದರೆ,	**ಸಹಿ**	**ದಿನಾಂಕ**
i	ನಾನು/ನಾವು ಹಣಕಾಸು ಸಂಸ್ಥೆಗಳು ಮತ್ತು ಅವುಗಳ ಭಾಗಿದಾರರ ಸ್ವತ್ತುಗಳನ್ನು ವಸೂಲಿ ಮಾಡುವುದಕ್ಕೆ ಕಾರಣವಾಗುವ ಮೂಲ ಮಾಹಿತಿಯನ್ನು ಒದಗಿಸುವ ಬಾತ್ಮೀದಾರ ಅಥವಾ ಮಾಹಿತಿದಾರನಿಗೆ ಪ್ರೋತ್ಸಾಹಧನ ಯೋಜನೆ, **2025** ಅನ್ನು ಓದಿಕೊಂಡಿದ್ದೇನೆ/ವೆ ಮತ್ತು ಅರ್ಥೈಸಿಕೊಂಡಿದ್ದೇನೆ/ವೆ.		
ii	ಒದಗಿಸಲಾದ ಮಾಹಿತಿಯು ಯಾವುದೇ ಇನಾಮು/ ಬಹುಮಾನದ ಹಕ್ಕನ್ನು ಹೊಂದಿರುವುದಿಲ್ಲವೆಂಬುದು ನನಗೆ/ನಮಗೆ ತಿಳಿದಿದೆ ಮತ್ತು ಈ ಸಂಬಂಧ ಮಾಹಿತಿದಾರ ಇನಾಮು/ಬಹುಮಾನ ಪ್ರಾಧಿಕಾರದ ನಿರ್ಧಾರಕ್ಕೆ ನಾನು/ ನಾವು ಬದ್ಧರಾಗಿರುತ್ತೇವೆ.		
iii	ಇನಾಮು/ ಬಹುಮಾನದ ಪ್ರಮಾಣವು ಮಾಹಿತಿಯ ನಿಖರತೆ ಮತ್ತು ಒದಗಿಸಲಾಗಿರುವ ದಸ್ತಾವೇಜುಗಳನ್ನಾಧರಿಸಿ ಸ್ವತ್ತುಗಳಿಗೆ ನಗದೀಕರಿಸಬಹುದಾದ ಮೌಲ್ಯವನ್ನು ಅವಲಂಬಿಸಿರುತ್ತದೆ ಎಂದು ನನಗೆ/ ನಮಗೆ ತಿಳಿದಿದೆ.		
iv	ನಾನು/ ನಾವು ಅಗತ್ಯವಿದ್ದಾಗಲೆಲ್ಲಾ ಹೆಚ್ಚುವರಿ ದಸ್ತಾವೇಜುಗಳು/ ಮಾಹಿತಿಯನ್ನು ಅಥವಾ ನೆರವನ್ನು ಒದಗಿಸುತ್ತೇನೆ/ವೆ.		

v	ಇನಾಮು/ ಬಹುಮಾನ ತಾನು ಒದಗಿಸಲಾಗಿರುವ ಮಾಹಿತಿಗೆ ನೇರವಾಗಿ ಹೇಳಬಹುದಾದ ಬಾಕಿಗಳ ಜಪ್ತಿ/ ವಸೂಲಾತಿಗೆ ಮಾತ್ರ ಸಂಬಂಧಿಸಿರುತ್ತದೆ ಎಂದು ನನಗೆ/ ನಮಗೆ ತಿಳಿದಿದೆ.		
vi	ಭಾರತೀಯ ನ್ಯಾಯ ಸಂಹಿತೆ, ೨೦೨೩ರ ೨೧೭ನೇ ಪ್ರಕರಣದ ಉಪಬಂಧಗಳನ್ನು ನಾನು/ ನಾವು ಓದಿಕೊಂಡಿದ್ದೇನೆ/ವೆ ಮತ್ತು ಅರ್ಥೈಸಿಕೊಂಡಿದ್ದೇನೆ/ ಹಾಗೂ ಒದಗಿಸಲಾಗಿರುವ ಮಾಹಿತಿಯು ಸುಳ್ಳೆಂದು ಮತ್ತು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾರೇ ಇತರೆ ವ್ಯಕ್ತಿಗೆ ನಷ್ಟ / ಹಾನಿಯುಂಟು ಮಾಡುವ ಉದ್ದೇಶವಿದೆ ಎಂದು ಕಂಡುಬಂದರೆ, ಆಗ ನಾನು/ ನಾವು ಕಾನೂನು ಕ್ರಮಕ್ಕೆ ಗುರಿಯಾಗುತ್ತೇನೆ/ವೆ ಎಂಬುದು ನನಗೆ/ನಮಗೆ ಅರಿವಿದೆ.		
vii	ಮಾಹಿತಿದಾರ ಇನಾಮು/ ಬಹುಮಾನ ಪ್ರಾಧಿಕಾರವು ಒದಗಿಸಲಾಗಿರುವ ಮಾಹಿತಿಯ ಪರಿಣಾಮವಾಗಿ ಯಾವುದೇ ವಸೂಲಿಯ ವಿವರಗಳಿಗೆ ಸಂಬಂಧಿಸಿದಂತೆ ಯಾವುದೇ ಪತ್ರವ್ಯವಹಾರ ಮಾಡುವುದಕ್ಕೆ ಬಾಧ್ಯವಾಗಿರುವುದಿಲ್ಲವೆಂದು ನಾನು/ ನಾವು ಒಪ್ಪುತ್ತೇನೆ/ವೆ.		
viii	ಇನಾಮು/ ಬಹುಮಾನ ಪಾವತಿಯು, ಇನಾಮು/ಬಹುಮಾನವನ್ನು ನೀಡುವ ಸಕ್ಷಮ ಪ್ರಾಧಿಕಾರದ ವಿವೇಚನಾನುಸಾರವಾಗಿ ಅನುಗ್ರಹಪೂರ್ವಕವಾಗಿರುತ್ತದೆ ಎಂದು ನಾನು/ ನಾವು ಒಪ್ಪಿಕೊಳ್ಳುತ್ತೇನೆ/ವೆ ಮತ್ತು ಯಾವುದೇ ಕಾನೂನು ನ್ಯಾಯಾಲಯದಲ್ಲಿ ತೀರ್ಮಾನದ ಸರಿತನವನ್ನು ಪ್ರಶ್ನಿಸುವ ಹಕ್ಕನ್ನು ನಾನು/ ನಾವು ಹೊಂದಿರುವುದಿಲ್ಲ.		
ix	ಈ ಯೋಜನೆಯಲ್ಲಿ ಅರ್ಥೈಸಿರುವಂತೆ ನನ್ನಿಂದ/ನಮ್ಮಿಂದ ಒದಗಿಸಲಾಗಿರುವ ಮಾಹಿತಿಯು ಮೂಲ ಮಾಹಿತಿಯಾಗಿದೆ.		
x	ನಾನು/ ನಾವು ಹಣಕಾಸು ಸಂಸ್ಥೆಯಲ್ಲಿನ ಲೇವಣಿದಾರರಾಗಿರುವುದಿಲ್ಲ ಅಥವಾ ಅದರ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿರುವ ವ್ಯಕ್ತಿಗಳಾಗಿರುವುದಿಲ್ಲ.		
xi	ನಾನು/ನಾವು ಮಾಡುವ ಮಾಹಿತಿ ಬಹಿರಂಗಪಡಿಸುವಿಕೆಯು ಸಾರ್ವಜನಿಕರ ಅನುಕೂಲಕ್ಕಾಗಿ ಮಾತ್ರವಾಗಿರುತ್ತದೆ ಮತ್ತು ವೈಯಕ್ತಿಕ ಲಾಭಕ್ಕಾಗಿಯಲ್ಲ.		
xii	ನನ್ನ/ನಮ್ಮ ಗುರುತನ್ನು ಖಚಿತಪಡಿಸುವುದಕ್ಕಾಗಿ ಅಥವಾ ನಾನು/ ನಾವು ಒದಗಿಸಲಾಗಿರುವ ಮಾಹಿತಿಯ ನಿಖರತೆಗಾಗಿ ನೋಡಲ್ ಅಧಿಕಾರಿ/ ವಸೂಲಾತಿ ಅಧಿಕಾರಿಯ ಮುಂದೆ ಹಾಜರಾಗಲು ಒಪ್ಪಿಕೊಂಡಿರುತ್ತೇನೆ/ವೆ. **(ಯಾವುದು ಅನ್ವಯಿಸುವುದಿಲ್ಲವೋ ಅದನ್ನು ಹೊಡೆದು ಹಾಕಿ)**		
xiii	ಇನಾಮು/ ಬಹುಮಾನವನ್ನು ಪಡೆಯುವುದಕ್ಕೂ ಮುಂಚಿತವಾಗಿ ನಾನು/ ನಾವು ಮರಣ ಹೊಂದಿದ ಸಂದರ್ಭದಲ್ಲಿ, ಅದನ್ನು ಈ ಕೆಳಕಂಡ ವಿವರಗಳನುಸಾರ ನನ್ನ/ ನಮ್ಮ ನಾಮನಿರ್ದೇಶಿತನಿಗೆ **(ನಾಮನಿರ್ದೇಶಿತರಿಗೆ)** ಸಂದಾಯ ಮಾಡಬಹುದು:-		

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ನಾಮನಿರ್ದೇಶಿತನ ಹೆಸರು	ವಯಸ್ಸು	ಸಂಬಂಧ	ಖಾಯಂ ವಿಳಾಸ	ಇನಾಮು/ ಬಹುಮಾನದ ಶೇಕಡಾವಾರು (ಒಬ್ಬರಿಗಿಂತ ಹೆಚ್ಚು ನಾಮನಿರ್ದೇಶಿತರಿದ್ದಲ್ಲಿ)

ದಿನಾಂಕ:

ಸ್ಥಳ: ಬಾತ್ಮೀದಾರ(ರು)/ಮಾಹಿತಿದಾರ(ರು) ಸಹಿ

ಹೇಳಿಕೆ/ ಘೋಷಣೆಯನ್ನು ಯಾವ ಸಕ್ಷಮ ಅಧಿಕಾರಿಯ ಮುಂದೆ ಸಹಿ ಮಾಡಲಾಗಿದೆಯೋ ಆ ಅಧಿಕಾರಿಯ ಸಹಿ	
ಅಧಿಕಾರಿಯ ಹೆಸರು ಮತ್ತು ಪದನಾಮ:	
ದಿನಾಂಕ:	
ಸ್ಥಳ:	

(**ಸೂಚನೆ:** ಮಾಹಿತಿಯನ್ನು ಒಬ್ಬ ಮಾಹಿತಿದಾರನಿಗಿಂತ ಹೆಚ್ಚಿನವರು ಜಂಟಿಯಾಗಿ ನೀಡಿದ್ದರೆ, ಅಂಥ ಎಲ್ಲಾ ಮಾಹಿತಿದಾರರಿಂದ ವಿವರಗಳನ್ನು ಪಡೆದುಕೊಳ್ಳಬೇಕು ಮತ್ತು ಈ ಘೋಷಣೆಗೆ ಎಲ್ಲಾ ಅಂಥ ಮಾಹಿತಿದಾರರ ಸಹಿಗಳನ್ನು ಪಡೆದುಕೊಳ್ಳಬೇಕು).

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH